ಅಧ್ಯಕ್ಷರು : ಹಾಗೆ ಆಗಲಿ, ಮಾನ್ಯ ಕುಮಾರಸ್ವಾಮಿಯವರು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಮಗೆ ಈ ವಿಷಯದ ಬಗ್ಗೆ ಚರ್ಚೆಯಾಗಲೇ ಬೇಕು. ನೀವು ಮಾತು ಕೊಟ್ಟಿದ್ದೀರಿ.

ಅಧ್ಯಕ್ಷರು : ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ನೀವು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲು ಒಂದು ಪ್ರಸ್ತಾವನೆ ಇದೆ ಅದನ್ನು ಓದುತ್ತೇನೆ.

3. ಅಧ್ಯಕ್ಷರ ತೀರ್ಮ :– ರಾಜ್ಯಪಾಲರ ಭಾಷಣಕ್ಕೆ ತಿದ್ದುಪಡಿ ತಂದಿರುವ ಬಗ್ಗೆ.

ವಿಷಯ : ದಿನಾಂಕ 03–06–2013ರ ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ 18ರಲ್ಲಿನ 28ನೇ ಕಂಡಿಕೆ 15ನೇ ಸಾಲಿನಿಂದ 17ನೇ ಸಾಲಿನವರೆಗೆ ಇರುವ 'ಕಾವೇರಿ ಐತೀರ್ಪಿನ ವಿಚಾರ'ದ ಬಗ್ಗೆ.

ಶ್ರೀಮಾನ್ ಹೆಚ್.ಡಿ.ಕುಮಾರಸ್ವಾಮಿಯವರು, ವಿರೋಧ ಪಕ್ಷದ ನಾಯಕರು, ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ದಿನಾಂಕ:03.06.2013ರಂದು ರಾಜ್ಯ ವಿಧಾನಮಂಡಲದಲ್ಲಿ ಮಾಡಿದ ಭಾಷಣದಲ್ಲಿನ ಪುಟ ಸಂಖ್ಯೆ 18ರಲ್ಲಿ 28ನೇ ಕಂಡಿಕೆ 15ನೇ ಸಾಲಿನಿಂದ 17ನೇ ಸಾಲಿನವರೆಗೆ ಇರುವ "ಕಾವೇರಿ ಐತೀರ್ಪಿಗೆ ಅನುಸಾರವಾಗಿ ಕಾವೇರಿ ಜಲಾನಯನದ ಬಾಕಿ ಇರುವ ವಿಸ್ತರಣಾ, ನವೀಕರಣ ಮತ್ತು ಆಧುನೀಕರಣ ಯೋಜನೆಗಳಿಗೆ ಭಾರತ ಸರ್ಕಾರದ ಅನುಮೋದನೆಯನ್ನು ಕೋರಲಾಗುವುದು" ಎಂಬ ವಾಕ್ಯವನ್ನು ಕೈಬಿಡಬೇಕೆಂಬ ತಿದ್ದುಪಡಿ ಸೂಚನಾ ಪತ್ರವನ್ನು ನೀಡಿದ್ದು, ಅದನ್ನು ಪರಿಶೀಲಿಸಲಾಗಿರುತ್ತದೆ. ಈ ಕುರಿತು ಲೋಕಸಭೆಯಲ್ಲಿ ನಡೆದ ಒಂದು ಉದಾಹರಣೆಯತ್ತ ಗಮನ ಸೆಳೆಯಲಾಗಿದೆ. ಸಂಸದೀಯ ಕಾರ್ಯ ವಿಧಾನದ ಕುರಿತು ಶ್ರೀ ಸುಭಾಷ್ ಕಶ್ಯಪ್‌ರವರ ಪುಸ್ತಕದ ಪುಟ ಸಂಖ್ಯೆ:462ರಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ.

21.3 Amendment seeking to alter the text of president's Address is inadmissible. During 5S (7LS)a member (Ram vilas paswan) tabled an amendment to Motion of Thanks on President's Address which sought to substitute certain portions of paragraph two of the Address. Amendment was not admitted. ಈ ಹಿನ್ನೆಲೆಯಲ್ಲಿ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು, ಮಾನ್ಯ ವಿರೋಧ ಪಕ್ಷದ ನಾಯಕರು

ನೀಡಿರುವ ರಾಜ್ಯಪಾಲರ ಭಾಷಣದ ತಿದ್ದುಪಡಿ ಪ್ರಸ್ತಾವದಲ್ಲಿ ಒಂದು ವಾಕ್ಯವನ್ನು ಕೈಬಿಡುವ ಮೂಲಕ ರಾಜ್ಯಪಾಲರ ಭಾಷಣಕ್ಕೆ ಬದಲಾವಣೆಯನ್ನು ಸೂಚಿಸಿರುವುದರಿಂದ ಸದರಿ ತಿದ್ದುಪಡಿ ಸೂಚನಾ ಪತ್ರವನ್ನು ಅಂಗೀಕರಿಸಿರುವುದಿಲ್ಲವೆಂದು ತೀರ್ಮ ನೀಡಿರುತ್ತೇನೆ. ಈಗ ತಾವು ಮಾತನಾಡಿ.

4. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ವಿರೋಧ ಪಕ್ಷದ ನಾಯಕರು) (ರಾಮನಗರ) : ಮಾನ್ಯ ಅಧ್ಯಕ್ಷರೆ, ಈಗ ಸದನದಲ್ಲಿ ನೂರಾರು ಹೊಸ ಸದಸ್ಯರುಗಳು ಬಂದಿದ್ದಾರೆ. ಕಾವೇರಿ ನೀರಿನ ವಿಷಯದಲ್ಲಿ ಇರತಕ್ಕಂಥ ಮಾಹಿತಿಗಳನ್ನು ತಮ್ಮ ಅಪ್ಪಣೆ ಮೇರೆಗೆ ನಮ್ಮ ಸಭಾ ನಾಯಕರು ಮತ್ತು ಕಾನೂನು ಸಚಿವರು ಮೊನ್ನೆ ಚರ್ಚೆ ಮಾಡೋಣ ಎಂದು ಏನು ಹೇಳಿದ್ದಾರೆ, ಆ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ನಾನು ಯಾರನ್ನೂ ಟೀಕೆ ಮಾಡುವುದಿಲ್ಲವೆಂದು ಹೇಳುತ್ತೇನೆ. ನೂತನವಾಗಿ ಬಂದಿರುವಂತಹ ಹಲವಾರು ಸದಸ್ಯರಿಗೆ ಮಾಹಿತಿಗಳು ಇಲ್ಲದಿರುವುದರಿಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಅದಕ್ಕೆ ಯಾರೂ ಅನ್ಯಥಾ ಭಾವಿಸಬಾರದೆಂದು ಮೊದಲೇ ಹೇಳುತ್ತೇನೆ. ಇವತ್ತಿನ ದಿನ ನೂತನ ರಾಜ್ಯ ಸರ್ಕಾರದಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಏನು ಕೊಟ್ಟಿದ್ದೀರಿ, ಅದಕ್ಕೆ ಮೊದಲನೆಯದಾಗಿ ತಮಗೆ ನನ್ನ ಗೌರವ ಪೂರ್ವಕವಾದ ವಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಗೌರವಾನ್ವಿತ ರಾಜ್ಯಪಾಲರ ಭಾಷಣಗಳು ವಿಧಾನಸಭೆ ಕಲಾಪದಲ್ಲಿ ಒಂದು ಸಂಪ್ರಾದಾಯವೆನ್ನುವ ಭಾವನೆ ಮೂಡತಕ್ಕಂಥ ರೀತಿಯಲ್ಲಿದ್ದು, ರಾಜ್ಯಪಾಲರ ಭಾಷಣದಲ್ಲಿ ಕಾರ್ಯಕ್ರಮಗಳು ನಡೆಯುತ್ತಿದೆ ಎನ್ನುವ ಭಾವನೆ ಕೆಲವರಲ್ಲಿ ಇದೆ ಎಂದು ನನ್ನ ಭಾವನೆ. ಮೊನ್ನೆ 3ನೇ ತಾರೀಖಿನಂದು ಗೌರವಾನ್ವಿತ ರಾಜ್ಯಪಾಲರು ಭಾಷಣವನ್ನು ಏನು ಮಾಡಿದ್ದಾರೆ, ಅದರಲ್ಲಿ ಸರ್ಕಾರದ ಮುಂದಿನ ಐದು ವರ್ಷಗಳ ದಿಕ್ಸೂಚಿ ಇರಬಹುದು ಅಥವಾ ಮೊದಲನೇ ವರ್ಷದ ಕಾರ್ಯಕ್ರಮಗಳು ಯಾವ ರೀತಿ ಇರಬಹುದು, ಇವತ್ತಿನ ರಾಜಕೀಯ ವ್ಯವಸ್ಥೆ ಬಗ್ಗೆ ಜನತೆಯಲ್ಲಿರುವಂತಹ ಹಲವಾರು ರೀತಿಯ ಭಾವನೆಗಳ ಬಗ್ಗೆ ಕೂಡ ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಸರ್ಕಾರ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೊಸ ಸರ್ಕಾರ